ಸಂಪುಟ ೩, ಸಂಚಿಕೆ ೧, ಮಾರ್ಚ್ ೨೦೨೪ | E-ISSN: 2583-8245
Volume 3, Issue 1, March 2024

# ವಚನಯುಗ – ಲಿಂಗತ್ವ ಪರಿಕಲ್ಪನೆ

**ಡಾ. ರೇಖಾ ಹಿಮಾನಂದ್**

ಲೇಖಕಿ, ಉಪನ್ಯಾಸಕರು

ಕಲಾ ಕಾಲೇಜು, ಬಿ.ಹೆಚ್. ರಸ್ತೆ,

ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

rekhahimanand@gmail.com

ಸಂಚಾರಣಾತ್ಮಕ ಸಂಸ್ಕೃತಿ ಒಳಗೆ ಸ್ತ್ರೀ–ಪುರುಷನ ಅಸ್ತಿತ್ವವು ಲಿಂಗ ವ್ಯವಸ್ಥೆಯಿಂದ ನಿರ್ಧರಿಸಲ್ಪಡುತ್ತದೆ. ಲಿಂಗ, ಲಿಂಗತ್ವ, ಲೈಂಗಿಕತೆ ದೃಷ್ಟಿಯಿಂದ ಪುರುಷನಿಗಿಂತ ಸ್ತ್ರೀಯ ಸ್ಥಾನಮಾನಗಳು ನಗಣ್ಯವೇ ಆಗಿವೆ. ಲಿಂಗ ಎನ್ನುವುದು ಸ್ತ್ರೀ ಪುರುಷರ ನಡುವಿನ ಜೈವಿಕ ವ್ಯತ್ಯಾಸಗಳನ್ನು ತಿಳಿಸುವಂತಹ ಪರಿಕಲ್ಪನೆಯಾದರೆ, ಲಿಂಗತ್ವ ಎನ್ನುವುದು ಸಂಸ್ಕೃತಿಯಿಂದ ನಿರ್ಮಿತವಾದ ಒಂದು ಸಾಮಾಜಿಕ ಸೃಷ್ಟಿ. ಬಿನ್ನ ಜೈವಿಕತೆಯ ಕಾರಣದಿಂದಾಗಿ ಸ್ತ್ರೀ ಪುರುಷರು ಮಾಡಬಹುದಾದ ಅಥವಾ ಮಾಡಬಾರದ ಕಾರ್ಯಗಳಲ್ಲಿ ವ್ಯತ್ಯಾಸಗಳಿರಬೇಕೆನ್ನುವುದು ಸಂಸ್ಕೃತಿ ನಿರ್ಮಾಣ ಮಾಡಿ ಪೋಷಿಸಿಕೊಂಡು ಬಂದಿರುವ ಲಿಂಗತ್ವದ ಭಿನ್ನತೆಗಳೆ ಆಗಿವೆ. ಗರ್ಭಧಾರಣೆ, ಶಿಶುವಿಗೆ ಜನನ ನೀಡುವುದು, ಶಿಶುವಿಗೆ ಹಾಲುಣಿಸುವುದು ಈ ಮೂರು ಸ್ತ್ರೀಯರು ಅವರ ದೇಹ ರಚನೆಯ ಕಾರಣದಿಂದ ನಿರ್ವಹಿಸುವ ಜೈವಿಕ ಪಾತ್ರಗಳು. ಇಂತಹ ಜೈವಿಕ ವೈಶಿಷ್ಟ್ಯತೆಯೇ ಅವಳ ಅಸ್ತಿತ್ವವಾದದ ಮೇಲೆ ಅತಿಕ್ರಮಣ ಮಾಡುತ್ತಾ ಬಂದಿದೆ. ಅದು ಎಷ್ಟರಮಟ್ಟಿಗೆ ಎಂದರೆ ಅವಳ ಬದುಕಿನಲ್ಲಿ ವಿವಾಹ, ತಾಯ್ತನ, ಮಕ್ಕಳ ಲಾಲನೆ – ಪಾಲನೆ ಯಂತಹ ಮುಖ್ಯವಾದ ಜವಬ್ದಾರಿಗಳನ್ನು ಅವಳು ನಿಭಾಯಿಸಿಯೇ ತೀರಬೇಕು. ಇವುಗಳ ಹೊರತು ಆಯ್ಕೆಯ ಸ್ವಾತಂತ್ರ್ಯ ಆಕೆಗಿಲ್ಲ. ಉತ್ಪಾದನಾಧಾರಳಾಗಿ ಅವಳ ಪಾತ್ರವನ್ನು ಗೌಣವಾಗಿಸಿ ಬಳಕೆದಾರಳಾಗಿ ಮಾತ್ರ ಗುರುತಿಸಲ್ಪಡುತ್ತಾಳೆ. ಲಿಂಗ ವ್ಯವಸ್ಥೆಯ ಈ ಸ್ಥಿರೀಕರಣದ ವ್ಯತ್ಯಯವನ್ನು ವಚನಯುಗ ವಿಮರ್ಶೆಗೆ ಒಳಪಡಿಸುತ್ತದೆ.

ಸ್ತ್ರೀ ವ್ಯಕ್ತಿತ್ವವನ್ನು ದೇಹದ ನೆಲೆಯಲ್ಲಿ ವ್ಯಾಖ್ಯಾನಿಸಿ, ಸಂತಾನೋತ್ಪತ್ತಿ ಮತ್ತು ವಿಷಯ ಸುಖದ ಸಾಧನವಾಗಿಸಿಕೊಂಡಿದ್ದ ಪುರುಷನಿಷ್ಠ ವ್ಯವಸ್ಥೆಯಲ್ಲಿ ಮಹಿಳೆಯರನ್ನು 'ಮನುಷ್ಯ'ರನ್ನಾಗಿ 'ಆತ್ಮ'ವುಳ್ಳ ಅರಿವಿನ ಜೀವಿಯೆಂದು ಗೌರವಿಸಿದ್ದು ಶರಣ ಸಂಸ್ಕೃತಿ. ಸ್ತ್ರೀಪರ ಧೋರಣೆಗಳಿಂದಾಗಿ ವ್ಯವಸ್ಥೆಯ ಸ್ತ್ರೀ ಸ್ತ್ರೀಸಂಬಂಧಿತ ಅಮಾನವೀಯ ಆಲೋಚನಾ ಕ್ರಮದಲ್ಲಿ ಪರಿವರ್ತನೆ ಇಲ್ಲಿ ಸಾಧ್ಯವಾಯಿತು. ಸ್ತ್ರೀಯರ ಸಾಮಾಜಿಕ, ಧಾರ್ಮಿಕ ಪ್ರವೇಶವನ್ನು ನಿರ್ಬಂಧಿಸಿದ ಕಟ್ಟುಪಾಡುಗಳು ಈ ಯುಗದಲ್ಲಿ ಬಿಗಿಯನ್ನು ಕಳೆದುಕೊಂಡವು. ಜಾತಿ, ಜನನ ಮತ್ತು ದೇಹ ರಚನೆಯ ನೆಲೆಯಲ್ಲಿ ಮಹಿಳೆಯ ಅಸ್ತಿತ್ವವನ್ನು ಶೂದ್ರ ನೆಲೆಗೆ ತಳ್ಳಲು ಕಾರಣವಾಗಿದ್ದ ಭಾವಸೂತಕಗಳು ಕರಗಲಾರಂಭಿಸಿದವು. "ಕೂಟಕ್ಕೆ ಸತಿಪತಿ ಎಂಬ ನಾಮವಲ್ಲದೆ ಅರಿವಿಂಗೆ ಬೇರೊಂದೊಡಲುಂಟೆ?" ಎನ್ನುವ ಆಯ್ದಕ್ಕಿಲಕ್ಕಮ್ಮನ ವೈಚಾರಿಕತೆ, "ಹೆಣ್ಣ ಬಿಟ್ಟು ಲಿಂಗವನೊಲಿಸಬೇಕೆಂಬರು, ಹೆಣ್ಣಿಂಗೆಯೂ ಲಿಂಗಕ್ಕೆಯೂ ವಿರುದ್ಧವೇ?" (ಆಕರ ಗ್ರಂಥ–೬) ಎನ್ನುವ ಗಜೇಶ ಮಸಣಯ್ಯನ ಪುಣ್ಯಸ್ತ್ರೀಯ ಪ್ರತಿಭಟನೆ, "ಮೊಲೆ ಮುಡಿ ಇದ್ದುದೆ ಹೆಣ್ಣೆಂದು ಪ್ರಮಾಣಿಸಲಿಲ್ಲ, ಕಾಸೇ ಮೀಸೆ ಕಠಾರವಿದ್ದುದೆ

DOI: 10.59176

ಗಂಡೆಂದು ಪ್ರಮಾಣಿಸಲಿಲ್ಲ, ಅದು ಜಗದ ಬಗೆ, ಬಲ್ಲವರ ನೀತಿಯಲ್ಲ" ಎನ್ನುವ ಸತ್ಯಕ್ಕನ ಲಿಂಗ ತಾರತಮ್ಯ ಖಂಡನೆಯ ದನಿಗಳು ಸ್ತ್ರೀ ಸಮುದಾಯದಲ್ಲಿ ಆತ್ಮನಿಷ್ಠೆ ಅನನ್ಯತೆಯ ಪ್ರಜ್ಞೆಯನ್ನು ಮೂಡಿಸಿದವು. "ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರಾದವರನ್ನೆಲ್ಲರನೊಂದೆ" ಎನ್ನುವ ಜಾತಿ ಭೇದ ಮುಕ್ತ ಧರ್ಮಮಾರ್ಗದ ಸಮಾನತೆಯ ಆಶಯಗಳಿಂದಾಗಿ ಸಮಾಜದ ವಿಭಿನ್ನ ಸ್ತರದ ಮಹಿಳೆಯರು ಶರಣ ಧರ್ಮದ ಅನುಯಾಯಿಗಳಾಗಿ ಸಮಾನ ಮನ್ನಣೆ ಪಡೆದುಕೊಂಡರು. ವ್ಯಕ್ತಿನಿಷ್ಠೆ ಸಾಧನೆ, ಸಾಮರ್ಥ್ಯ ಮತ್ತು ಸ್ವಾನುಭವದ ನೆಲೆಯಲ್ಲಿ ಶರಣರು ಮಹಿಳೆಯರ ಘನತೆಯನ್ನು ಗೌರವಿಸಿದರೆನ್ನುವುದಕ್ಕೆ ಲಿಂಗಮ್ಮ, ಅಕ್ಕಮ್ಮ, ರಾಯಮ್ಮ, ಕಾಳವ್ವೆ ಇತ್ಯಾದಿ ಕೆಳವರ್ಗದ ವಚನಕಾರ್ತಿಯರು ನಿದರ್ಶನವಾಗಿದ್ದಾರೆ. ಲಿಂಗ ಅಸಮಾನತೆ, ಜಾತಿ ನಿರಸನ ಮತ್ತು ಕಾಯಕ ತತ್ವಗಳಿಗೆ ತೀವ್ರ ಬದ್ಧತೆ ತೋರಿರುವ ವಚನಕಾರ್ತಿಯರು ತಮ್ಮ ಲಿಂಗ ಜಾತಿ ಮತ್ತು ವೃತ್ತಿ ಕೀಳರಿಮೆ ಕಳೆದುಕೊಂಡು ತಮ್ಮ ಕಾಯಕಗಳನ್ನು ತಮ್ಮ ಅಂತರಂಗ ಶೋಧನೆ ಮತ್ತು ಅನುಭವದ ಅಭಿವ್ಯಕ್ತಿಗೆ ಸಾಧನವಾಗಿಸಿಕೊಂಡಿದ್ದಾರೆ. ಪತಿಯ ಕಾಯಕದೊಂದಿಗೆ ಕೈಗೂಡಿಸಿದವರು ಹಲವರಾದರೆ, ಸ್ವತಂತ್ರ ಕಾಯಕ ಕೈಗೊಂಡವರು ಕೆಲವರು. ಕುಟ್ಟುವ, ನೂಲುವ, ನೇಯುವ, ಕಸ ಗುಡಿಸುವ, ಕುಂಬಾರಿಕೆ, ಬಡಿಗತನ, ಹಗ್ಗ ಹೊಸೆಯುವ, ದೂಪದ ಮುಂತಾದ ತಮ್ಮ ಕಾಯಕಗಳ ಅನುಭವಗಳ ಮೂಲಕವೇ ಆಧ್ಯಾತ್ಮಿಕ ಉನ್ನತಿಯಲ್ಲಿ ಸ್ತ್ರೀತನದ ಅಸ್ಮಿತೆಯನ್ನು ಪುರುಷನ ಸರಿಸಮಾನವಾಗಿಸಿದ್ದಾರೆ.

೧೨ನೇ ಶತಮಾನದ ಶರಣ ಸಂಸ್ಕೃತಿಯಲ್ಲಿ ಪಡೆದ ಪುರುಷ ಸಮಾನ ಅವಕಾಶಗಳಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ಅತಿ ಮುಖ್ಯವಾದದ್ದು. ಇದರ ಪರಿಣಾಮವಾಗಿ ಸಾಹಿತ್ಯ ರಚನೆ ಪುರುಷರ ಸ್ವತ್ತು ಅನ್ನುವುದನ್ನು ಹುಸಿಗೊಳಿಸಿ ಅನುಭವ ಮಂಟಪದಲ್ಲಿ ಸ್ತ್ರೀಯರು ಕೂಡ ತಮ್ಮ ಅನುಭವಗಳನ್ನು ವಚನ ಮಾಧ್ಯಮದ ಮೂಲಕ ಸಮರ್ಥವಾಗಿ ಅಭಿವ್ಯಕ್ತಪಡಿಸಿದರು. ಅಂತಹ ಸ್ತ್ರೀಯರಲ್ಲಿ ಅಕ್ಕಮಹಾದೇವಿ ಅಗ್ರಗಣ್ಯಗಳು ಬೌದ್ಧಿಕ ಮತ್ತು ಭಾವನಾತ್ಮಕತೆಯನ್ನು ಆಧ್ಯಾತ್ಮದ ಜೊತೆಗೆ ಬೆಸೆದ ಅಪರೂಪದ ಶಿವಶರಣೆ. ಆಕೆ ಇಂದು ಅಕ್ಕಮಹಾದೇವಿಯನ್ನು ನಾವು ಎಷ್ಟೇ ಎದೆಗಾರ್ತಿಯೆಂದು ಹೊಗಳಿದರು ೮೦೦ ವರ್ಷಗಳ ಹಿಂದೆ ಸಮಾಜದ ಚೌಕಟ್ಟನ್ನು ದಾಟಿ ಗಂಡನಾದ ರಾಜ ಕೌಶಿಕನನ್ನು ತ್ಯಜಿಸಿ ಶರಣಸತಿ– ಲಿಂಗಪತಿ ಭಾವವನ್ನು ಸ್ಥಾಯಿಯಾಗಿ ಹಿಡಿದು ಚೆನ್ನಮ್ಮಲ್ಲಿಕಾರ್ಜುನನೇ ತನ್ನ ಗಂಡ ಎಂದವಳು ಆಕೆ.

ಕಲ್ಯಾಣದ ಅನುಭವ ಮಂಟಪ ಇಡೀ ಜಗತ್ತಿನಲ್ಲಿಯೇ ಪ್ರಪ್ರಥಮ ಲೋಕಸಭೆ ಎನ್ನಬಹುದು. ಅಲ್ಲಿ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೂ ದಶ ದಿಕ್ಕಿನಿಂದ ಶರಣ ಸಂಸ್ಕೃತಿಯನ್ನು ಹರಿಯಲು ಜನ ಬರುತ್ತಿದ್ದರು. ಆಧುನಿಕ ಕಾಲದಲ್ಲಿ ಮಹಿಳೆಯರಿಗೆ ಸಂವಿಧಾನಾತ್ಮಕ ಮೀಸಲಾತಿಯ ಬೆಂಬಲದ ನಡುವೆಯೂ ಆಕೆಯ ಅಸ್ತಿತ್ವವನ್ನು ಮೊಟಕುಗೊಳಿಸುವ ಹುನ್ನಾರಗಳಿಗೆ ಶರಣರ ಅನುಭವ ಮಂಟಪ ಮಾನವೀಯ ಮೌಲ್ಯಗಳ ಮಹಾಮನೆಯಾಗಿ ಮಾದರಿಯಾಗಬಲ್ಲದು. ಇಲ್ಲಿ ಮಹಿಳೆಗೆ ಮುಕ್ತ ಅವಕಾಶದೊಂದಿಗೆ ಆಕೆಯ ನಿಲುವನ್ನು ಸ್ವಾಗತಾರ್ಹವಾಗಿ ಪರಿಗಣಿಸಲಾಗುತ್ತಿತ್ತು. ಮಹಿಳೆಗೂ ಸಮಾಜವನ್ನು ತರ್ಕಿಸುವ, ಪ್ರಶ್ನಿಸುವ ಸ್ವಾತಂತ್ರ್ಯ ವಚನಯುಗದಲ್ಲಿ ಕಂಡುಬರುತ್ತದೆ.ಶತಮಾನಗಳಾಳದ ಅವಳ ಮೌನಕ್ಕೆ ಧ್ವನಿಯಾಗಿ ಬಂದದ್ದು ವಚನಯುಗ. ಅದೇ ರೀತಿ ಶಿವಶರಣರ ಅನುಭವದಲ್ಲಿ ಮಿಂದು ತನು ಮನ ಮತ್ತು ಪ್ರಾಣಶುದ್ಧವಾಯಿತೆಂದು ಹೇಳುವ ಅಕ್ಕಮಹಾದೇವಿಗೆ ಅನುಭವ ಮಂಟಪದ

ಶರಣರನ್ನು ಕಂಡು ಅವರು ಕೇಳಿದ ಕಠಿಣ ಮತ್ತು ತೀಕ್ಷ್ಣ ಪ್ರಶ್ನೆಗಳಿಗೆ ತಾನು ದೇವರಿಗೆ ಒಡವೆಯಾದೆ ಎಂಬ ಧನ್ಯತಾಭಾವ ಆಕೆಯ ಉತ್ತರದಲ್ಲಿತ್ತು. ಅಕ್ಕನ ಅಂತಃಕರಣ ಮತ್ತು ಅನುಭವದ ನೆಲೆಯನ್ನು ಹರಿಯಲು ಪ್ರಯತ್ನಪಟ್ಟರೆ ನಮಗೆ ಕವಿ ಚಾಮರಸನ ನುಡಿ ನೆನಪಿಗೆ ಬರುತ್ತದೆ. ಚಾಮರಸನು ಹೇಳಿದಂತೆ "ಅಕ್ಕ ಸಾಮಾನ್ಯ ಹೆಣ್ಣಲ್ಲ, ಅವಳು ಅಲ್ಲಮಪ್ರಭುಗಳ ಅನುಗ್ರಹ ಪಡೆಯಲು ಬಂದ ಪಾರ್ವತಿಯ ಸಾತ್ವಿಕ ಕಳೆ, ದೈವಾಂಶ ಉಳ್ಳ ರುದ್ರಕನ್ಯೆ." ಎಂತಹ ಎತ್ತರದ ತತ್ವಜ್ಞಾನಿಗಳು ಕೂಡ ದೇವರನ್ನು ವರ್ಣಿಸುವುದು ಕಷ್ಟ ಆದರೆ ಅಕ್ಕ ತನ್ನ ವಚನದಲ್ಲಿ ಭಗವಂತನನ್ನು ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವ ಎಂದು ವರ್ಣಿಸುತ್ತಾಳೆ.

ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚಲುವಂಗೆ
ಎಡೆ ಇಲ್ಲದ ತಡೆ ಇಲ್ಲದ ತೆರೆಹಿಲ್ಲದ ಕುರುಹಿಲ್ಲದ ಚಲುವಂಗೆ
ನಾನೊಲಿದೆ ಎಲೆ ಅವ್ವಗಳಿರಾ
ಭವವಿಲ್ಲದ ಭಯವಿಲ್ಲದ ನಿರ್ಭಯ ಚೆಲುವಂಗೊಲಿದೆ ನಾನು
ಸೀಮೆ ಇಲ್ಲದ ನಿಸ್ಸೀಮಂಗೊಲಿದೆ ನಾನು. (ಆಕರ ಗ್ರಂಥ–೧)

ಪರಮಾತ್ಮನ ಸತ್ಯ ಸುಂದರ ಸ್ವರೂಪವನ್ನು ಸರಳವಾಗಿ ಆತ್ಯಂತಿಕವಾಗಿ ಅಕ್ಕನಿಂದ ಮಾತ್ರವೇ ಸಾಕ್ಷಾತ್ಕರಿಸಿಕೊಳ್ಳಲು ಸಾಧ್ಯ ಎಂಬುದು ಸ್ತ್ರೀ ಕುಲಕ್ಕೆ ಅಕ್ಕನಿತ್ತ ಸಂದೇಶವಾಗಿದೆ. ಮಹಿಳೆ ಸ್ವಾತಂತ್ರ್ಯದಿಂದ, ಮೋಕ್ಷದಿಂದ ಹೊರದೂಡಲ್ಪಟ್ಟವಳು ಎಂಬ ಸಾಂಪ್ರದಾಯಿಕ ಬಂಧನಗಳನ್ನು ಒಮ್ಮಿಂದೊಮ್ಮೆಲೆ ಕಳಚುವ ಅಕ್ಕನ ಈ ಆಧ್ಯಾತ್ಮಿಕ ಉನ್ನತಿಕೆಯು ಮಹಿಳಾ ಸಬಲೀಕರಣವನ್ನು ಧ್ವನಿಸುತ್ತದೆ. ಮಧುರ ಭಕ್ತಿ ಸಾಧಕಳಾದ ಮಹಾದೇವಿಯಕ್ಕ ಸ್ತ್ರೀ ವಿರೋಧಿ ವಾಸ್ತವದ ವೈರುಧ್ಯಗಳೊಂದಿಗೆ ಮುಖಾಮುಖಿಯಾಗುತ್ತಲೇ, ಲೋಕೋತ್ತರವಾಗಿ ಬೆಳೆದ ಅಪ್ರತಿಮ ಸಾಧಕಿ, ಶ್ರೇಷ್ಠ ಅನುಭಾವಿಯಾಗಿ "ಹೆಣ್ಣಿನ ಗೌರವ ಸಾಧನೆಯ, ಹೆಣ್ಣಿನ ಸ್ವಾತಂತ್ರ್ಯ ಸಾಧನೆಯ, ಹೆಣ್ಣಿನ ಪರಮಾರ್ಥ ಸಾಧನೆಯ ಒಂದು ಮಹಾಪ್ರಕರಣವಾಗಿ" ಇತಿಹಾಸವನ್ನು ನಿರ್ಮಿಸಿದ್ದಾಳೆ.

ಸ್ತ್ರೀ ಮತ್ತು ಪುರುಷ ಎಂಬ ಸಮಾಜ ಸೂಚಿತ ಅಸಮಾನತೆಯ ಮಾನದಂಡವನ್ನೇ ವಚನಕಾರರು ದೇಹಾ ಮತ್ತು ಆತ್ಮದ ಸಮ್ಮಿಲನದಂತೆ ಆ ಎರಡು ಲಿಂಗ ಧೋರಣೆಗಳು ಎಂಬ ಆಪ್ತತೆಯನ್ನು ಬೆಸೆದು ಸಮಾನತೆಯ ಸೂತ್ರದಲ್ಲಿ ಹಿಡಿದಿಟ್ಟಿದ್ದಾರೆ. ದೇಹ, ಮನಸ್ಸು ಮತ್ತು ಆತ್ಮಗಳ ಸಂಬಂಧವನ್ನು ಆಧ್ಯಾತ್ಮಿಕ ಪ್ರಕ್ರಿಯೆಗಳಲ್ಲಿ ಅವುಗಳ ಪಾತ್ರಗಳ ಮೂಲಕ ವಿವರಿಸುವ ಕಾಯಕವನ್ನು ಶರಣರು ಮಾಡಿದ್ದಾರೆ. ಆದಯ್ಯನ ವಚನ ಇದಕ್ಕೆ ಉದಾಹರಣೆ.

"ಅಂಗವೆಂಬ ಅಂಗನೆ ಆತ್ಮನೆಂಬ ಪುರುಷನನಪ್ಪಿ
ಮುಂಡೆತನವಿಲ್ಲದೆಯಿಪ್ಪ ಭೇದವ ತಿಳಿದು ನೋಡಿರಣ್ಣಾ.
ಕುಂಟಣಿಯಾದ ಒಡಹುಟ್ಟಿದ ಮನ ನಪುಂಸಕನಾದ ಕಾರಣ
ಲಿಂಗಸಂಗಿಯಲ್ಲದೆ ಹೋದ ಕೇಳಿರಣ್ಣಾ.
ಆತ್ಮನು ಪುರುಷನಾದಡೂ ಲಿಂಗವ ಕೂಡುವ ಭರದಿಂದ

ಸತಿಯಾಗಬಲ್ಲ.

ಶರಣಸತಿ ಲಿಂಗಪತಿಯೆಂಬುದುಂಟಾಗಿ,
ಶಿವಜ್ಞಾನವೆಂಬ ಸಖಿಯ ಕೈವಿಡಿದು,
ಸೌರಾಷ್ಟ್ರ ಸೋಮೇಶ್ವರ ಲಿಂಗವ ಕೂಡಿ ಸುಖಿಯಾದೆನು".

(ಆಕರ ಗ್ರಂಥ–೫)

ಆದಯ್ಯ ನಿರ್ವಚಿಸುವಂತೆ ಅಂಗವೆಂಬ ಹೆಣ್ಣಿಗೆ ಆತ್ಮವೇ ಪತಿ. ಇವೆರಡರ ಅಪ್ಪುಗೆಯಲ್ಲಿ, ಸಾಮರಸ್ಯದಲ್ಲಿ ದೈವೀಭಾವದ ಆವಿರ್ಭಾವ. ದೈವೀದಾಂಪತ್ಯದ ಸುಖದಲ್ಲಿ ಇವೆರಡು ತಲ್ಲೀನ. ಹೀಗಾಗಿ ಅಂಗವೆಂಬ ಹೆಣ್ಣು ಚಿರಮುತ್ತೈದೆ. ಯಾಕೆಂದರೆ ಆತ್ಮವಿರುವತನಕ ಮಾತ್ರ ದೇಹದ ಅಸ್ತಿತ್ವ. ಆತ್ಮ ತೊಲಗಿದಾಗ ಅದು ಪಂಚಭೂತಗಳಲ್ಲಿ ವಿಲೀನಗೊಂಡು ಬಯಲಾಗಿ ಹೋಗುತ್ತದೆ. ಕಾರಣ ಅದಕ್ಕೆ ವೈಧವ್ಯ ಪ್ರಾಪ್ತವಾಗುವುದೇ ಇಲ್ಲ. ಆತ್ಮ ಅಂಗದೊಂದಿಗೆ ಗಂಡಾಗಿ ವರ್ತಿಸಿದರೂ ಪರಾತ್ಪರ ವಸ್ತುವಾದ ಲಿಂಗದೊಂದಿಗೆ ಸಾಮರಸ್ಯವನ್ನು ಹೊಂದುವಾಗ ಹೆಣ್ಣಾಗಿಯೇ ದೈವೀಸುಖ ಪಡೆಯುತ್ತದೆ. ಇಲ್ಲಿ **'**ಶರಣ ಸತಿ–ಲಿಂಗಪತಿ**'** ಭಾವ ಪ್ರಕಟವಾಗುತ್ತದೆ. **"**ಪರತತ್ವ ಹೆಣ್ಣೂ ಅಲ್ಲ, ಗಂಡೂ ಅಲ್ಲ: ಸಾಕಾರವೂ ಅಲ್ಲ, ನಿರಾಕಾರವೂ ಅಲ್ಲ**"** ಈ ರೀತಿಯಾಗಿ ಅದು ಸಾರ ನಿರಾಕಾರವಾಗಿ ಹೆಣ್ಣಾಗಿ ಗಂಡಾಗಿ ವ್ಯವಹರಿಸಿ ಸೃಷ್ಟಿ ಕ್ರಿಯೆಯನ್ನು ಮುಂದುವರಿಸುತ್ತದೆ. ಇದನ್ನು ಪರಿಗಣಿಸಿದರೆ ಹೆಣ್ಣು ಗಂಡಿನಲ್ಲಿ ಭೇದಭಾವವನ್ನು ಮಾಡಿ ಪುರುಷತತ್ವದ ಹಿರಿಮೆಯನ್ನು ಮೆರೆಯುವುದು ಎಷ್ಟು ಅಪಹಾಸ್ಯಕರವೆಂಬ ಮಾತು ವಿಧಿತವಾಗುತ್ತದೆ. ಇದನ್ನು ಮನಗಂಡೇ ಶರಣರು "ನಡುವೆ ಸುಳಿವ ಆತ್ಮ ಹೆಣ್ಣೂ ಅಲ್ಲ, ಗಂಡೂ ಅಲ್ಲ" ಎಂದು ಸಾರಿ ಸ್ತ್ರೀ–ಪುರುಷ ಸಮಾನತೆಯನ್ನು ಎತ್ತಿ ಹಿಡಿದರು. ವೈಜ್ಞಾನಿಕವಾಗಯೂ ಸಹ ಈ ವಿಷಯವನ್ನು ಪರಿಶೀಲಿಸುವುದಾದರೆ ಶೂನ್ಯದಿಂದ ಪ್ರಕಟವಾಗುವ ಮೂಲಶಕ್ತಿ (superforce) ಹೆಣ್ಣೂ ಅಲ್ಲ ಗಂಡೂ ಅಲ್ಲ. (Neither negative nor positive) ಇದರಿಂದ ಪ್ರಕಟವಾಗುವ ಭೌತಿಕ ಶಕ್ತಿ ಸಾಂದ್ರೀಕರಣಗೊಂಡು ಕಣಗಳಾಗಿ ರೂಪಾಂತರ ಹೊಂದುವಾಗ ಧನ (positive) ಹಾಗೂ ಋಣ (negative) ಕಣಗಳಾಗಿ ಮೂಡಿಬಂದು ಪರಮಾಣುಗಳ ರಚನೆಯಾಗಿ ಸೃಷ್ಟಿರಚನೆ ಮುಂದುವರೆಯುತ್ತದೆ. ಶರಣರು ಸಾರಿದ ತತ್ವ ಇದರಿಂದ ದೃಢಗೊಳ್ಳುತ್ತದೆ. ಈ ತತ್ವಗಳ ಆಧಾರದ ಮೇಲೆ ನಾವಿಂದು ಸ್ತ್ರೀ–ಪುರುಷ ಸಮಾನತೆಯನ್ನು ಸಾಧಿಸುವತ್ತ ಮುನ್ನಡೆಯಬೇಕಾಗಿದೆ.

"ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ" ಎನ್ನುವಂತೆ ತನ್ನ ಪತಿಯೊಂದಿಗಿನ ತಾದಾತ್ಮ್ಯ ಪ್ರೇಮಕ್ಕೆ ತನ್ನ ಹೆಸರಿನ ಮೂಲಕವೇ ಸಾಕ್ಷಿಯಾದವಳು ಗಜೇಶ ಮಸಣಯ್ಯಗಳ ಪುಣ್ಯಸ್ತ್ರೀ. ಆಕೆ ಬರೆದ ಹತ್ತೂ ವಚನಗಳು ಮೌಲ್ಯ ಮತ್ತು ಸತ್ವಾದಾರಿತ.

"ಹೆಣ್ಣ ಬಿಟ್ಟು ಲಿಂಗವನೊಲಿಸಬೇಕೆಂಬುರು ಹೆಣ್ಣಿಂಗೆಯೂ ಲಿಂಗಕ್ಕೆಯೂ ವಿರುದ್ಧವೇ?" (ಆಕರ ಗ್ರಂಥ–೪) ಎಂಬ ಆಕೆಯ ವಚನ ಪುರುಷ ಪ್ರಧಾನ ವ್ಯವಸ್ಥೆಗೆ ಹಾಕಿದ ನೇರ ಪ್ರಶ್ನೆಯಾಗಿದೆ. ಅಸಮಾನತೆಯ ವಿರುದ್ಧದ ದನಿಯಾಗಿದೆ. ವೈದಿಕ ಧರ್ಮಾಚರಣೆ, ಮೌಢ್ಯ, ಕಂದಾಚಾರಗಳಿಗೆ ತುತ್ತಾಗಿದ್ದ ಹೆಣ್ಣನ್ನು ಅಬಲೆಯೆಂದಷ್ಟೇ ಅಲ್ಲ, ಧಾರ್ಮಿಕ, ಕೌಟುಂಬಿಕ,

ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಅವಕಾಶಗಳಿಂದ ವಂಚಿತಳನ್ನಾಗಿಸುವ ವ್ಯವಸ್ಥಿತ ಸಂಚು ಎಲ್ಲಾ ಕ್ಷೇತ್ರಗಳಲ್ಲೂ ತಾಂಡವವಾಡುತ್ತಿರುವ ಇಂತಹ ನಯವಂಚನೆಯ ಸಮಾಜದಲ್ಲಿ ಮಹಿಳೆ ದನಿ ಇಲ್ಲದವಳಾಗಿ, ಅಕ್ಷರ ವಂಚಿತಳಾಗಿ, ಅಗೌರವ ಅವಹೇಳನಕ್ಕೆ ತುತ್ತಾಗಿ ಕೀಳರಿಮೆಯಿಂದ ಬಂಧನದಲ್ಲಿ ಬದುಕುತ್ತಾ ಉಸಿರುಗಟ್ಟುವ ವಾತಾವರಣದಲ್ಲಿ ಜೀವಂತ ಶವವಾದ ಸ್ಥಿತಿಯನ್ನು ಆಕೆ ಪ್ರಶ್ನಿಸುತ್ತಾಳೆ.

"ಸ್ತ್ರೀಯಲ್ಲ ಪುರುಷನಲ್ಲ ನಪುಂಸಕನಲ್ಲ ಆತ್ಮನೆಂದರಿಯಬಹುದಲ್ಲದೆ ಕಾಣಿಸಬಾರದು" (ಚಂದಿಮರಸ) ಎಂದು ಸ್ತ್ರೀ ಪುರುಷ ತತ್ವಗಳನ್ನು 'ಆತ್ಮ'ದ ಸಮಾನ ನೆಲೆಯಲ್ಲಿ ನಿರ್ವಚಿಸಿದ ಶರಣ ಚಳುವಳಿಯ ಪ್ರಧಾನ ಆಶಯವು ಮಹಿಳೆಯರ ಆತ್ಮ ವಿಶ್ವಾಸವನ್ನೇ ವರ್ಧಿಸಿ, ಕೀಳರಿಮೆಯನ್ನು ಕಳೆಯುವಲ್ಲಿ ಬಹುದೊಡ್ಡ ಶಕ್ತಿಯಾಗಿ ಪರಿಣಮಿಸಿತು. ವಚನ ಚಳುವಳಿಯ ಲಿಂಗ ಸಮಾನತೆಯ ಧ್ವನಿ ಅನೇಕ ವಚನಕಾರ್ತಿಯರ ಆಲೋಚನಾ ಕ್ರಮವನ್ನು ಪ್ರಭಾವಿಸಿದೆ. ಪ್ರಾಕೃತಿಕ ಉದ್ದೇಶಕ್ಕಾಗಿಯೇ ವಿಶಿಷ್ಟವಾಗಿರುವ ಜೈವಿಕ ಭಿನ್ನತೆಯನ್ನು ತಾರತಮಗೊಳಿಸಿದ ಅವೈಚಾರಿಕತೆಯನ್ನು ಅನೇಕ ವಚನಕಾರ್ತಿಯರು ಪರಾಮರ್ಶಿಸಿದ್ದಾರೆ. ಹೆಣ್ತನವನ್ನು ಅಧೀನ ನೆಲೆಯಲ್ಲಿ ಅಪಮಾನಿಸಿದ ಪುರುಷ ಪ್ರಧಾನತೆಯ ಅವಾಸ್ತವವನ್ನು ಗೊಗ್ಗವ್ವೆ ಪ್ರಶ್ನಿಸಿರುವುದು ಹೀಗೆ.

"ಮೊಲೆ ಮುಡಿ ಬಂದಡೆ ಹೆಣ್ಣೆಂಬರು
ಮೀಸೆ ಕಾಸೆ ಬಂದಡೆ ಗಂಡೆಂಬರು
ಈ ಉಭಯದ ಜ್ಞಾನ
ಹೆಣ್ಣೋ ಗಂಡೋ ನಾಸ್ತಿನಾಥ." (ಆಕರ ಗ್ರಂಥ-೩)

"ನಾಸ್ತಿನಾಥ" ಎಂಬ ಅಂಕಿತವನ್ನಿಟ್ಟುಕೊಂಡು ವಚನಗಳನ್ನು ರಚಿಸಿದವಳು ಗೊಗ್ಗವ್ವೆ. ಆಕೆಯ ಆರು ವಚನಗಳು ದೊರೆತಿವೆ. ಗೊಗ್ಗವ್ವೆಯ ದೃಷ್ಟಿಯಲ್ಲಿ ಹೆಣ್ಣು-ಗಂಡುಗಳೆಂಬ ಭೇದಭಾವ ಸಲ್ಲದು. ಯಾಕೆಂದರೆ ಅನುಭಾವ ಸಾಧನಗೆ, ಆತ್ಮಜ್ಞಾನಕ್ಕೆ, ಅರುವಿನ ಸಂಪಾದನೆಗೆ ಸ್ತ್ರೀ ಪುರುಷ ಭೇದವನ್ನು ನಿರಾಕರಿಸಿ ಆತ್ಮಕ್ಕೆ ಲಿಂಗಭೇದವಿಲ್ಲ ಎಂದು ಲಿಂಗಸಮಾನತೆಯ ಧೋರಣೆಯನ್ನು ತನ್ನ ವಚನದಲ್ಲಿ ಎತ್ತಿ ಹಿಡಿದಿದ್ದಾಳೆ. ಕೇವಲ ಶಾರೀರಿಕ ರಚನೆಯಿಂದ ನಾವು ಹೆಣ್ಣು ಗಂಡುಗಳೆಂಬ ಭೇದವನ್ನು ಕಲ್ಪಿಸಬೇಕೆ ವಿನಹ ಆತ್ಮಗಳಲ್ಲಾಗಲಿ, ಜ್ಞಾನದಲ್ಲಿಯಾಗಲಿ ಈ ಉಭಯ ಭಾವವಿಲ್ಲ. ಗೊಗ್ಗವ್ವೆಯ ಈ ಅಭಿಪ್ರಾಯವು ಲಿಂಗ ಸಮಾನತೆಯ ಮುಖ್ಯ ಆಶಯವನ್ನು ಎತ್ತಿ ಹಿಡಿದಿದೆ. ಹಾಗೂ ಅರಿವಿಗೆ ಲಿಂಗ ತಾರತಮ್ಯವಿಲ್ಲವೆನ್ನುವ ಧೋರಣೆಯು ಮಹಿಳೆಯರ ವೈಚಾರಿಕ ವ್ಯಕ್ತಿತ್ವವನ್ನು ಬಲಪಡಿಸಿದೆ. ಮುಂದುವರಿದು ಆಕೆ,

"ಗಂಡು ಮೋಹಿಸಿ ಹೆಣ್ಣ ಹಿಡಿದಡೆ,
ಅದು ಒಬ್ಬರ ಒಡವೆ ಎಂದು ಅರಿಯಬೇಕು.
ಹೆಣ್ಣು ಮೋಹಿಸಿ ಗಂಡ ಹಿಡಿದಡೆ,
ಉತ್ತರವಾವುದೆಂದರಿಯಬೇಕು

ಸಂಪುಟ ೩, ಸಂಚಿಕೆ ೧, ಮಾರ್ಚ್ ೨೦೨೪ | E-ISSN: 2583-8245
Volume 3, Issue 1, March 2024

ಈ ಎರಡರ ಉಭಯವ ಕಳೆದು ಸುಖಿ ತನಾಗಬಲ್ಲಡೆ,
ನಾಸ್ತಿನಾಥನು ಪರಿಪೂರ್ಣನೆಂಬೆ". (ಆಕರ ಗ್ರಂಥ–೩)

ಈ ವಚನದಲ್ಲಿ ಗೊಗ್ಗವ್ವೆ ಹೆಣ್ಣು ಗಂಡಿನ ಸಮಾನತೆಯನ್ನು ದಾಖಲಿಸುತ್ತಾ, ಹಿಂದಿನ ಕಾಲದಿಂದಲೂ ಹೆಣ್ಣನ್ನು ಒಂದು ಒಡವೆ ಎಂದು ಕಾಣುವ ಸಮಾಜವನ್ನು ಧಿಕ್ಕರಿಸಿದ್ದಾಳೆ. ಜೊತೆಗೆ ಮೋಹಿಸುವ ಕ್ರಿಯೆ ಹೆಣ್ಣು ಗಂಡಿಗೆ ಸಮಾನವಾದದ್ದು ಎಂಬ ಒಳ ಸತ್ಯವನ್ನು ಪ್ರಕಟಿಸಿ, ಸ್ತ್ರೀ ಪುರುಷ ಸಮಾನತೆಯ ಕಹಳೆಯನ್ನು ಮೊಳಗಿಸಿದ್ದಾಳೆ. ಮುಖ್ಯವಾಗಿ ಗಂಡು ಹೆಣ್ಣಿನ, ಹೆಣ್ಣು ಗಂಡಿನ ಮೋಹದ ಬಲೆಯನ್ನು ಕಳಚಿದಾಗ ಮಾತ್ರ ತಾನು ಸುಖಿಯಾಗಬಹುದು ಮತ್ತು ಪರಿಪೂರ್ಣಳೂ ಆಗಬಹುದು ಎಂಬ ಅರಿವಿನ ಮಾರ್ಗವನ್ನು ತಿಳಿಸಿದ್ದಾಳೆ.

"ಕೂಟಕ್ಕೆ ಸತಿಪತಿ ಎಂಬ ನಾಮವಲ್ಲದೇ ಅರಿವಿಂಗೆ ಬೇರೊಂದೊಡಲುಂಟೆ?" ಎನ್ನುವ ಆಯ್ದಕ್ಕಿ ಲಕ್ಕಮ್ಮ ಸ್ತ್ರೀ ಪುರುಷ ಸಮಾನತೆಯನ್ನು 'ಅರಿವಿನ' ನೆಲೆಯ ಮೂಲಕ ಸಮರ್ಥಿಸಿದರೆ,
ಜೈವಿಕ ವಿಶಿಷ್ಟತೆಯನ್ನು ತರತಮಗೊಳಿಸಿ, ಈ ಆತ್ಮ ನಿರ್ವಹಿತ ಚೈತನ್ಯವನ್ನು ಉಪೇಕ್ಷಿಸಿದ ವ್ಯವಸ್ಥೆಯ ಪಕ್ಷಪಾತವನ್ನು ಎತ್ತಿ ಹಿಡಿದು, ಲಿಂಗನೀತಿಯನ್ನು ಪುರಸ್ಕರಿಸುವ ಅವಿವೇಕತನವನ್ನು "ಅದು ಗಜದ ಹಾಹೆ: ಬಲ್ಲವರ ನೀತಿಯಲ್ಲ" ಎಂದು ಸತ್ಯಕ್ಕ ಖಂಡಿಸಿದ್ದಾಳೆ.

ಕ್ರಿ.ಶ. ೧೧೬೦ರಲ್ಲಿ ಬಸವೋತ್ತರ ವಚನಕಾರ್ತಿಯಾಗಿ ಕಂಡುಬರುವ ರೆಮ್ಮವ್ವೆ, ರಾಟೆಯಿಂದ ನೂಲು ತೆಗೆಯುವ ಕಾಯಕದ ಮೂಲಕ ಆಧ್ಯಾತ್ಮ ಸಾಧನೆ ಮಾಡಿ ಕದಿರ ರೆಮ್ಮವ್ವೆ ಎಂದು ಗುರುತಿಸಿಕೊಂಡವಳು. "ಕದಿರರೆಮ್ಮಿಯೊಡೆಯ ಗುಮ್ಮೇಶ್ವರ" ಎಂಬ ಅಂಕಿತದಲ್ಲಿ ರೆಮ್ಮವ್ವೆ ರಚಿಸಿರುವ ನಾಲ್ಕು ವಚನಗಳು ದೊರೆತಿವೆ. ಅವುಗಳಲ್ಲಿ ಒಂದಾದ,

"ಎಲ್ಲರ ಗಂಡರು ಪರದಳ ವಿಭಾಡರು
ಎನ್ನ ಗಂಡ ಮನದಳ ವಿಭಾಡ
ಎಲ್ಲರ ಗಂಡಂದಿರು ಗಜವೇಂಟೆಕಾರರು
ಎನ್ನ ಗಂಡ ಮನವೇಂಟಿಕಾರ
ಎಲ್ಲರ ಗಂಡಂದಿರು ತಂದಿಕ್ಕಿಸಿಕೊಂಬರು
ಎನ್ನ ಗಂಡ ತಾರದೇ ಇಕ್ಕಿಸಿಕೊಂಬ
ಎಲ್ಲರ ಗಂಡಂದಿರಿಗೆ ಮೂರು
ಎನ್ನ ಗಂಡಂಗೆ ಅದೊಂದೇ,
ಅದೊಂದೂ ಸಂದೇಹ, ಕದಿರೆಮ್ಮಿಯೊಡೆಯ ಗುಮ್ಮೇಶ್ವರಾ."

(ಆಕರ ಗ್ರಂಥ–೨)

ಈ ವಚನದಲ್ಲಿ ಪತಿಯ ಪ್ರತೀಕದಲ್ಲಿ ಪರಮಾತ್ಮನ ಅನುಸಂಧಾನ ಮಾಡಿದ್ದಾಳೆ. ಈಕೆಯ ಸತಿಪತಿ ಭಾವದ ಎರಡು ವಚನಗಳಲ್ಲಿ ಲೋಕದ ಗಂಡರ ಪ್ರಾಕೃತಿಕ ಮಿತಿಗಳ ಸೂಚನೆ ಮತ್ತು ಇದಕ್ಕೆ ವಿರುದ್ಧವಾಗಿರುವ ದೈವೀಗಂಡನ 'ಅತಿ ಮಾನವತೆ'ಯ ವಿವರಣೆಯಲ್ಲಿ ಲೋಕದ ನಿರಾಕರಣೆಯ ಸ್ಪಷ್ಟ ಸೂಚನೆ ಇದೆ. ಅಕ್ಕಮಹಾದೇವಿಯಂತೆ ಲೋಕದ ಗಂಡರನ್ನು ಅವರ ಮಿತಿಗಳಿಗಾಗಿಯೇ ನಿರಾಕರಿಸುವ ರೆಮ್ಮವ್ವೆ ಸೀಮಾತೀತವಾದ, ಸರ್ವತಂತ್ರ ಸ್ವತಂತ್ರ ನಿರುಪಾಧಿಕ ತತ್ವವನ್ನು ಸಾಂಕೇತಿಕವಾಗಿ ವರ್ಣಿಸಿರುವ ವಿಧಾನ ವಿನೂತನವಾಗಿದೆ.

ವಚನಯುಗದ ಮೂಲ ಆಶಯ ಲಿಂಗ ಸಮಾನತೆ. ಅದರ ಜೊತೆಜೊತೆಗೆ ಧರ್ಮ, ಸಮಾಜ, ಆಧ್ಯಾತ್ಮ ಅನುಭವಕ್ಕೆ ಸಂಬಂಧಿಸಿದ ತಮ್ಮ ವೈಯಕ್ತಿಕ ಅನಿಸಿಕೆಗಳನ್ನು ನಿರ್ಭಯವಾಗಿ ಪ್ರತಿಪಾದಿಸಿದವರು ವಚನಕಾರರು. ವಚನ ಚಳುವಳಿಯ ವೈಚಾರಿಕ ಮತ್ತು ಆಧ್ಯಾತ್ಮಿಕ ಸತ್ವವನ್ನು ಆತ್ಮಶೋಧನೆ ಮತ್ತು ಸಾಮಾಜಿಕ ಶುದ್ಧೀಕರಣದ ಸಮನ್ವಯ ಸೂತ್ರವನ್ನಾಗಿಸಿಕೊಂಡ ಶರಣೆಯರಾದ ಲಿಂಗಮ್ಮ, ಲಕ್ಕಮ್ಮ, ಅಕ್ಕಮ್ಮ, ಮಹಾದೇವಮ್ಮ, ಕಾಳವ್ವೆ, ಸತ್ಯಕ್ಕ, ರಾಯಮ್ಮನವರು ವ್ಯಕ್ತಪಡಿಸಿದ ಉತ್ಕಟ ಧರ್ಮಶ್ರದ್ಧೆ, ತತ್ವನಿಷ್ಠೆ, ಋಜು ಜೀವನದ ಕಾಳಜಿ, ಮುಕ್ತಾಯಕ್ಕ, ಮಹಾದೇವಿಅಕ್ಕ, ಬೊಂತಾದೇವಿ, ನೀಲಾಂಬಿಕೆ ಮುಂತಾದವರ ಅನುಭಾವಿಕ ಚಿಂತನೆಗಳು ಸ್ತ್ರೀತನದ ಸತ್ವಕ್ಕೆ ಹೊಸ ಭಾಷ್ಯಯನ್ನು ದೊರಕಿಸಿಕೊಟ್ಟವು. "ಮಾಯೆ", "ರಾಕ್ಷಸಿ" ಎನ್ನುವ ಸ್ತ್ರೀ ಪ್ರತೀಕಗಳು ಮುರಿದುಬಿದ್ದು "ಹೆಣ್ಣು ಹೆಣ್ಣಲ್ಲ, ಹೆಣ್ಣು ರಾಕ್ಷಸಿಯಲ್ಲ, ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧಮಲ್ಲಿಕಾರ್ಜುನ" (ಸಿದ್ದರಾಮ) ಎನ್ನುವ ಉನ್ನತ ಮನ್ನಣೆ ಪ್ರಾಪ್ತವಾಯಿತು. ಹೀಗೆ ಮಹಿಳೆಯ ವ್ಯಕ್ತಿ ವಿಶಿಷ್ಟತೆ ಮತ್ತು ಸ್ವಾಯತ್ತತೆಯನ್ನು ದಾಖಲಿಸುವ ಪ್ರಥಮ ಪ್ರಯತ್ನವೆನಿಸಿರುವ ವಚನಯುಗದಲ್ಲಿ ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಂಡ ಒಟ್ಟು ೩೫ ವಚನಕಾರ್ತಿಯರ ೧೩೫೧ ವಚನಗಳು ಈವರೆಗೆ ಪ್ರಕಟವಾಗಿವೆ. ಇದರಲ್ಲಿ ೩೩ ಮಹಿಳೆಯರ ಹೆಸರು ಮತ್ತು ವಚನಗಳು ಮಾತ್ರ ಲಭ್ಯವಿದ್ದು, ಅಂಕಿತ ಸಾಮ್ಯದಿಂದ ಮಹಿಳೆಯರ ರಚನೆಗಳೆಂದು ಊಹಿಸಲಾಗಿರುವ ಎರಡು ವಚನಗಳು ಲಭ್ಯವಿದ್ದು ವಚನ ಕರ್ತೃವಿನ ವಿಚಾರಗಳು ತಿಳಿದು ಬಂದಿಲ್ಲ. ಈ ಎಲ್ಲಾ ಶಿವಶರಣೆಯರು ಹಾಗೂ ಶಿವಶರಣರು ಸರಳ ಸಹಜ ಭಾಷೆಯಲ್ಲಿ ಸ್ತ್ರೀ ವಿಶಿಷ್ಟತೆಯ ಅಸ್ಮಿತೆಯನ್ನು ದಾಖಲಿಸುತ್ತಾ ಸ್ತ್ರೀ ಪುರುಷ ಸಮಾನತೆಯನ್ನು ದಾಖಲಿಸುತ್ತಾ ಸಮಾನತೆಯ ಸಮಾಜಕ್ಕೆ ಮಾದರಿಯಾಗಿದ್ದಾರೆ.

**ಆಕರ ಗ್ರಂಥಗಳು:**

೧. ವಚನ ಸಾಹಿತ್ಯ (ಸಂಪುಟ–೫), ಎಮ್.ಚಿದಾನಂದಮೂರ್ತಿ, ೧೯೭೫, ಬೆಂಗಳೂರು ವಿಶ್ವವಿದ್ಯಾನಿಲಯ ಬೆಂಗಳೂರು, ಪುಟ ಸಂಖ್ಯೆ:೬೭.

೨. ಶಿವಶರಣರ ವಚನಾ ಸಂಪುಟ–೫, (ಸಂ) ವೀರಣ್ಣ ರಾಜೂರ, ೨೦೦೧, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವಚನಗಳ ಪುಟ ಸಂಖ್ಯೆ:೨೩೮–೨೪೦.

೩. ಬಸವಯುಗದ ಶಿವಶರಣೆಯರು, ಲಲ್ಲೇಶ್ವರಿ ಶಂ.ಮೂಗಿ, ೧೯೮೧, ಐಬಿಹೆಚ್ ಪ್ರಕಾಶನ, ಬೆಂಗಳೂರು, ಪುಟ ಸಂಖ್ಯೆ:೨೪೮.

೪. ಕರ್ನಾಟಕ ನಂಸ್ಕೃತಿ ಸಮೀಕ್ಷೆ, ಡಾ.ಎಚ್.ತಿಪ್ಪೇರುದ್ರಸ್ವಾಮಿ, ೨೦೦೩, ಡಿವಿಕೆ ಮೂರ್ತಿ ಪ್ರಕಾಶನ, ಮೈಸೂರು, ಪುಟ ಸಂಖ್ಯೆ:೩೪೪.

೫. ಶರಣತತ್ವ ವಿವೇಚನೆ (ಭಾಗ–೩), ಸಂ, ಪ್ರೊ.ಬಿ. ವಿರೂಪಾಕ್ಷಪ್ಪ, ೨೦೦೬, ಸ್ನೇಹ ಪ್ರಿಂಟರ್ಸ್, ಬೆಂಗಳೂರು, ಪುಟ ಸಂಖ್ಯೆ:೭೭.

೬. ಶರಣ ಚರಿತಾಮೃತ, ಡಾ. ಸಿದ್ದಯ್ಯ ಪುರಾಣಿಕ, ೨೦೧೦, ಮೆ॥ ಪ್ರಿಂಟ್ ಪಾರ್ಕ್, ಬೆಂಗಳೂರು, ಪುಟ ಸಂಖ್ಯೆ:೪೨೦.